ಶ್ರೀ ಎಚ್. ಸಿ. ಬೋರಯ್ಯ.—ಸ್ಪಷ್ಟವಾದ ನಕ್ಷೆ ಮತ್ತು ಅಂದಾಜು ತಯಾರಾಗುತ್ತಿದೆ, ಅದಕ್ಕೆ 10 ಸಾವಿರ ರೂಪಾಯಿಗಳನ್ನು ಒದಗಿಸಿಕೊಂಡಿದ್ದೇವೆ, ಎಂದು ನಾನು ಈಗಾಗಲೇ ಹೇಳಿದ್ದೇನೆ. 1968-69ನೇ ಸಾಲಿನಲ್ಲಿ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಬಸ್ ನಿರ್ಮಾಣಕ್ಕೆ ಬೇಕಾದ ಭೂಮಿಯನ್ನು ಅಕ್ವೈರ್ ಮಾಡಿಕೊಂಡು, ಸ್ವಾಧೀನಕ್ಕೆ ತೆಗೆದುಕೊಂಡು ಈಗಾಗಲೇ 6 ತಿಂಗಳಾಗಿದೆ. ಇದರ ನಕ್ಷೆ ಮತ್ತು ಅಂದಾಜು ತಯಾರಾಗುವುದಕ್ಕೆ ಎಷ್ಟು ವರ್ಷಗಳಾಗುತ್ತವೆ ?

ಶ್ರೀ ಎಚ್. ಸಿ. ಬೋರಯ್ಯ.—ಎಷ್ಟು ವರ್ಷ ಏನೂ ಬೇಕಾಗಿಲ್ಲ. ತೀವ್ರಗತಿಯಿಂದ ಅದನ್ನು ತಯಾರು ಮಾಡುತ್ತಿದ್ದೇವೆ. ಈಗಾಗಲೇ ಅದಕ್ಕೆ 10 ಸಾವಿರ ರೂಪಾಯಿಗಳನ್ನು ಒದಗಿಸಿ ಕೊಂಡಿದ್ದೇವೆ ಎಂದು ಹೇಳಿದ್ದೇನೆ.

ಅಧ್ಯಕ್ಷರು.—225 ನೇ ಪ್ರಶ್ನೆಯನ್ನು, ಶ್ರೀ ಕೆ. ಸಂಗನಗೌಡ ಕೇಳಬಹುದು.

Drinking water well at Gundalgere Village

225. Sri K. SANGANA GOWDA (Lingsugur) [On behalf of SRI RAJA PID NAIK (Shorapur)].—

Will the Minister for Development be pleased to stats :—

(*a*) whether it has come to the notice of Government that there is no drinking water well at Gundalgere village of Shorapur Taluk, Gulbarga District ;

(*b*) whether Government are aware that there is only one water source at a distance of one and a half mile from the village ;

(*c*) if so, whether the Government would take up this village in National Rural Water Supply Scheme ?

A.—Sri B. L. GOWDA (Deputy Minister for Co-operation).—

(*a*) A drinking water well was taken up but water could not be struck due to lack of water sources.

(*b*) Yes.

(*c*) The Chief Engineer (General) has already been addressed to examine the feasibility of providing drinking water to this village, under National Rural Water Supply and Sanitation Programme and send necessary plans and estimates to Government.

ಶ್ರೀ ಕೆ. ಸಂಗನಗೌಡ.—ಸ್ವಾಮಿ, ಗುಲ್ಬರ್ಗ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಗುಂಡಲ್ಗೆರೆ ಗ್ರಾಮದಲ್ಲಿ ಕುಡಿಯುವ ನೀರಿನ ಬಾವಿಯನ್ನು ತೋಡಿಸಲು ಕ್ರಮವನ್ನು ಕೈಕೊಳ್ಳಲಾಗಿದು ನೀರಿನ ಮೂಲಗಳು ದೊರೆಯದಿದ್ದರಿಂದಾಗಿ ನೀರು ಬರಲಿಲ್ಲ ಎಂದು ಹೇಳಿದ್ದೀರಿ, ಅಲ್ಲಿನ ಜನಗಳು ಕುಡಿಯುವುದಕ್ಕೆ ನೀರು ಇಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ, ಆದ್ದರಿಂದ ವಾನವೀಯತೆಯ ದೃಷ್ಟಿಯಿಂದಲಾದರೂ ಆ ಗ್ರಾಮದ ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಸಿ ಆ ಬಾವಿಯಲ್ಲಿ ಜಲ ಇಲ್ಲದೆ ಬತ್ತಿ ಹೋಗಿವೆ. ಈಗ ಒಂದೂವರೆ ಮೈಲಿಯಿಂದ ಒಂದು ಜಾಗದಿಂದ ಪೈಪುಹಾಕಿ ಆ ಗ್ರಾಮಕ್ಕೆ ನೀರು ಸರಬ್ಲೈ ಮಾಡಬೇಕೆಂದು ಅದೇತ ಕೊಚ್ಚಿದ್ದೇವೆ. ಅದರ ಎಸ್ಟಿಮೇಟು ತಯಾರಾಗುತ್ತಿದೆ. ಅದು ಬಂದಮೇಲೆ ಅದರ ಬಗ್ಗೆ ಯೋಚನೆ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಬಾವಿಗಳನ್ನು ತೆಗೆಯುವುದಕ್ಕೆ ಮುಂಚೆ ಅಲ್ಲಿ ನೀರು ಬೀಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಜಿಯಾಲಾಜಿಕಲ್ ಇಲಾಖೆಯವರಿಂದ ಸರ್ವೆ ಮಾಡಿಸಿ, ಪ್ರಯೋಗ ಮಾಡಿಸುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಎಷ್ಟೋ ಸಂದರ್ಭಗಳಲ್ಲಿ ಜಿಯಾಲಾಜಿಸ್ಟ್ ಇಲಾಖೆಯವರು ಎಗ್ಸಾಮಿನ್ ಮಾಡಿ ಅಲ್ಲಿ ನೀರು ಬರುತ್ತದೆ ಬಾವಿಯನ್ನು ತೆಗೆಯಿರಿ ಎಂದು ಹೇಳಿದ ಮೇಲೆ ಬಾವಿಗಳನ್ನು ತೆಗೆದರೂ ಕೂಡ ನೀರು ಸಿಕ್ಕದೇ ಇರತಕ್ಕ ಸಂದರ್ಭಗಳು ಇವೆ. ಆದ್ದರಿಂದ ಈ ವಿಚಾರದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

Collection of fees on paddy and other Foodgrains

228. **Sri H. D. DEVEGOWDA** (Holenarasipur).—

Will the Minister for Development be pleased to state :—

(*a*) whether any representation has been received from the Public of Holenarasipur Taluk that the Taluk Regulated Market Committee is collecting fees on paddy and other foodgrains which comes to Holenarsipur Town for Milling purpose for domestic consumption ;

(*b*) whether any Market Yard has been fixed and if so, the area so fixed ;

(*c*) whether there is any provision to fix the entire area within the Municipal boundary as market area ;

(*d*) whether the Government would take necessary steps not to collect any fees on food articles which come for milling purpose and also to fix the correct Market Yard ?

A.—**Sri B. L. GOWDA** (Deputy Minister for Co-operation).—

(*a*) Yes.

(*b*) No.

(*c*) Yes.

(*d*) The suggestion to exempt food articles from the levy of tax is not acceptable as fees are collected only on Paddy and Ragi. Action is being taken to acquire necessary land for establishment of Market Yard.

ಉತ್ತರದಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಇಲ್ಲಿ ನಾನು ಹೇಳಬೇಕಾಗಿದೆ. ಅದು ಮೈಸೂರು ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ರೆಗ್ಯುಲೇಷನ್ 1966 ಎನ್ನುವ ಕಾನೂನನ್ನು 1968 ನೇ ಮೇ ತಿಂಗಳಲ್ಲೇ ಜಾರಿಗೆ ತರಲಾಗಿದೆ. ಆದುದರಿಂದ ಈ ಹೊಸ ಕಾನೂನಿನಂತೆ ವಾಣಿಜ್ಯ ಮಾಡುವವರು ಏನೂ ತೆರಿಗೆ ಕೊಡಬೇಕಾಗಿಲ್ಲ. ಎಲ್ಲ ತೆರಿಗೆಗಳೂ ಕೊಳ್ಳುವವರಮೇಲೆ ಬೀಳುತ್ತದೆ. ಇನ್ನು ಮುಂದೆ ರೈತರಿಗೆ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನು ಯಾವಾಗ ಜಾರಿಗೆ ತಂದಿದ್ದೀರಿ ?

† ಶ್ರೀ ಬಿ. ಎಲ್. ಗೌಡ.—1968 ನೇ ಮೇ ತಿಂಗಳಿಂದ ಜಾರಿಗೆ ಕೊಡಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಕನ್‌ಸಂಷನ್ ಪರ್ಪಸನ್‌ಗೆ ಅಗಲೀ ಇಲ್ಲವೇ ಮಿಲಿಂಗು ಪರ್ಪಸನ್‌ಗೆ ಅಗಲಿ ಜನ ಅವರ ಬತ್ತವನ್ನು ಹೊರಕ್ಕೆ ತೆಗೆದುಕೊಂಡು ಹೋದರೆ ಸುಂಕ ಕೊಡಬೇಕೆಂದು ಈಗಲೂ ವಸೂಲು ಮಾಡುತ್ತಿರುವುದು ಸರಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ